# ಶ್ರೀ ರಾಮಮಾನಸ ಸ್ತೋತ್ರಮ್ – ೪



**ರಾಜಾಧಿರಾಜಾಯ ರಮಾವರಾಯ ।**
**ರಾತ್ರಿಂಚರಾಣಾಮಭಿಸಂಹರಾಯ ॥**
**ರಾಜ್ಯಾಭಿಷಿಕ್ತಾಯ ರಘೂತ್ತಮಾಯ ।**
**ಶ್ಯಾಮಾಯ ರಾಮಾಯ ನಮೋ ನಮಸ್ತೇ ॥ ೧೨ ॥**

ರಾಜಾಧಿರಾಜನಿಗೆ, ರಮಾಕಾಂತನಿಗೆ, ದೈತ್ಯಸಂಹಾರಕನಿಗೆ, ರಾಜ್ಯಾಭಿಷಿಕ್ತನಿಗೆ, ರಘುಕುಲಶ್ರೇಷ್ಠನಿಗೆ, ಶ್ಯಾಮವರ್ಣನಿಗೆ, ಶ್ರೀರಾಮಚಂದ್ರನಿಗೆ ಪುನಃ ಪುನಃ ನಮಸ್ಕಾರಗಳು. ॥ ೧೨ ॥

**ಪ್ರಭೋ ಚಾಮರಾದರ್ಶ ಛತ್ರಾದಿಕಾನ್ವೈ ।**
**ಮಹಾರಾಜ ರಾಜೋಪಚಾರಾನ್ ಗೃಹಾಣ ॥**
**ಸುಹೃತ್ಪದ್ಮಪೀಠಂ ಮುರಾರೇ ಪ್ರವಿಶ್ಯ ।**
**ಮಮೇಶಾಪರಾಧಾನ್ ಹಿ ಸರ್ವಾನ್ ಕ್ಷಮಸ್ವ ॥ ೧೩ ॥**

ಪ್ರಭೋ, ಮಹಾರಾಜ, ಚಾಮರ, ಛತ್ರ, ಕನ್ನಡಿ ಮುಂತಾದ ರಾಜೋಪಚಾರಗಳನ್ನು ಸ್ವೀಕರಿಸು. ಮುರಾರಿ, ನನ್ನ ಹೃದಯ ಕಮಲ ಪೀಠದ ಮೇಲೆ ಅಧಿಷ್ಠಿತನಾಗು. ನನ್ನ ಎಲ್ಲ ಅಪರಾಧಗಳನ್ನೂ ಕ್ಷಮಿಸು. ॥೧೩॥

**ಇತ್ಯೇವ ಸಾಂಗಮುಪಚಾರ -ಯುಕ್ತಾಂ ।**
**ಶ್ರೀ ರಾಮಪೂಜಾಂ ಹೃದಯೇ ಬಹಿರ್ವಾ ॥**
**ಕುರ್ವಂತಿ ಯೇ ಧರ್ಮಮಥಾರ್ಥಕಾಮಾನ್ ।**
**ಮೋಕ್ಷಾದಿಕಾಂ ಸಂಪದಮಾಪ್ನುವಂತಿ ॥ ೧೪ ॥**

ಹೀಗೆ ಶ್ರೀರಾಮಚಂದ್ರ ಪ್ರಭುವಿನ ಪೂಜೆಯನ್ನು ಯಾರು ಮಾನಸೋಪಚಾರಗಳಿಂದಾಗಲೀ, ಬಾಹ್ಯ ಉಪಚಾರಗಳಿಂದಾಗಲೀ ಮಾಡುವರೋ ಅವರಿಗೆ ಧರ್ಮ-ಅರ್ಥ-ಕಾಮ-ಮೋಕ್ಷವೇ ಮುಂತಾದ ಸಂಪತ್ತುಗಳು ದೊರೆಯುವುವು. ॥ ೧೪ ॥

**ಶ್ರೀವರ್ಣಪೂರ್ವಂ ಸಕಲಾರ್ಥದಂ ವೈ ।**
**ರಾಮೇತಿವರ್ಣದ್ವಯಮೇವ ಪೂರ್ವಮ್ ॥**
**ಜಯೇತಿ ರಾಮೇತಿ ಜಯದ್ವಯೇತಿ ।**
**ರಾಮೇತಿ ಜಪ್ತ್ವಾ ತು ಪುನರ್ನ ಜನ್ಮ ॥ ೧೫ ॥**

'ಶ್ರೀ' ಎಂಬ ಅಕ್ಷರಕ್ಕೆ ಮೊದಲು 'ರಾಮ' ಎಂಬ ಎರಡು ಅಕ್ಷರಗಳನ್ನು ಕೂಡಿಸಬೇಕು. ನಂತರ 'ಜಯ' ಶಬ್ದವನ್ನು ಕೂಡಿಸಿ 'ರಾಮ' ಶಬ್ದವನ್ನು ಯೋಜಿಸಿ ಅವುಗಳ ಮುಂದೆ 'ಜಯ ಜಯ ರಾಮ' ಎಂಬ ಶಬ್ದಗಳನ್ನು ಹೊಂದಿಸಬೇಕು. ಆಗ 'ಶ್ರೀ ರಾಮ ಜಯ ರಾಮ ಜಯ ಜಯ ರಾಮ' ಎಂಬ ತ್ರಯೋದಶಾಕ್ಷರೀ ಶ್ರೀರಾಮಮಂತ್ರವಾಗುತ್ತದೆ. ಈ ಮಂತ್ರವನ್ನು ಜಪಿಸುವವನಿಗೆ ಪುನರ್ಜನ್ಮವಿಲ್ಲದೆ ಮುಕ್ತಿಯು ಲಭಿಸುವುದು. ॥ ೧೫ ॥

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ

ಇತರರ ಅಭಿಪ್ರಾಯಗಳನ್ನು ಆಧರಿಸಿ ನಮ್ಮ ಸಂತೋಷವನ್ನು ನಾವೇಕೆ ಕಂಡುಕೊಳ್ಳಬೇಕು? ಅದನ್ನು ನಮ್ಮ ಹೃದಯದಲ್ಲೇ ಕಂಡುಕೊಳ್ಳಬಹುದಲ್ಲವೆ?

*— ರೂಸ್ಸೋ*

ಹೊಸ ವಿಚಾರವೆಂದು ಆಶ್ಚರ್ಯಪಡಬೇಡ. ಏಕೆಂದರೆ, ಹಲವು ಮಂದಿ ಸ್ವೀಕರಿಸದೆ ಇರುವ ಮಾತ್ರಕ್ಕೆ ಒಂದು ಸಂಗತಿ ಸತ್ಯವಾಗಿ ಉಳಿಯದು ಎನ್ನಲಾರೆವು. ಇದು ನಿನಗೆ ತಿಳಿದೇ ಇದೆ.

*— ಸ್ಪಿನೋಜಾ*

ಹಲವರು ಸ್ವಾತಂತ್ರ್ಯವನ್ನು ಕುರಿತು ಮಾತನಾಡಬಲ್ಲರು, ಬರೆಯಬಲ್ಲರು, ಅದಕ್ಕಾಗಿ ಹೋರಾಡಬಲ್ಲರು. ಇನ್ನು ಕೆಲವರು ಹೊರನೋಟಕ್ಕೆ ಆ ಕುರಿತು ನಟಿಸಬಹುದು. ಆದರೆ ಯಾರು ಸ್ವತಂತ್ರ ಚಿಂತಕರಾಗಿದ್ದಾರೋ ಅವರು ಮಾತ್ರ ನಿಜವಾಗಿಯೂ ಸ್ವತಂತ್ರರು.

*— ಜಾರ್ಜ್ ಬರ್ಕ್‌ಲಿ*

ಪ್ರತಿಭೆ ನಿಜವಾಗಿ ಒಂದು ರೀತಿಯ ದೃಷ್ಟಿ. ಅದು ಬುದ್ಧಿಯ ಕಣ್ಣಲ್ಲ; ಹೃದಯದ ಕಣ್ಣು. ಈ ಒಳಗಣ್ಣು ತೆರೆದಾಗ ವಿಶ್ವದ ಹೃದಯವೇ ತೆರೆಯುತ್ತದೆ.

*— ತೀ.ನಂ.ಶ್ರೀಕಂಠಯ್ಯ*

ಮಾನವ ವ್ಯಕ್ತಿಗಳು ಗುರಿ ಎಂದೇ ಯಾವಾಗಲೂ ಗುರುತಿಸಬೇಕು; ಅವರು ಗುರಿಯನ್ನು ತಲಪಲು ಬೇಕಾದ ಸಾಧನಗಳು ಎಂದು ಎಂದಿಗೂ ತಿಳಿಯಬೇಡ.

*— ಇಮ್ಯಾನುವೆಲ್ ಕ್ಯಾಂಟ್*